# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಗ್ರಾಮ ಪಂಚಾಯಿತಿ / ಗ್ರಾಮೀಣ ಸ್ಥಳೀಯ ಸಂಸ್ಥೆಗಳು ದಿನಾಂಕ: 01.04.2015 ರಿಂದ ದಿನಾಂಕ: 31.03.2023 ರವರೆಗೆ ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿಸಬೇಕಾಗಿರುವ ಕುಡಿಯುವ ನೀರು ಮತ್ತು ಬೀದಿ ದೀಪ ಸ್ಥಾವರಗಳ ಸಮನ್ವಯಗೊಳಿಸಿಕೊಂಡಿರುವ ಬಾಕಿ ವಿದ್ಯುತ್ ಶುಲ್ಕದ ಮೊತ್ತವನ್ನು ಖಾತರೀಕರಣ (Securitisation) ಮೂಲಕ ತೀರುವಳಿ ಮಾಡುವ ಕುರಿತು.

**ಓದಲಾಗಿದೆ:**

1. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ಪತ್ರ ಸಂಖ್ಯೆ: ಬೆವಿಕಂ/ವ್ಯ.ನಿ/ನಿ(ಹ)/ಮುಪ್ರವ್ಯ(ಹ&ವಾ)/ಉಪ್ರವ್ಯ(ಪಿಂ)/ಸಪ್ರವ್ಯ(ಕಂ)/ಸ/ಬಿಸಿ-27/23-24/ 398-407 ದಿನಾಂಕ: 22.02.2024.
2. ಆಡಳಿತ ಇಲಾಖೆಯ ಪ್ರಸ್ತಾವನೆ ಕಡತ ಸಂಖ್ಯೆ: ಎನರ್ಜಿ/61/ಪಿಎಸ್ಆರ್/2024.
3. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD/359/EXP 1/2023 ದಿನಾಂಕ: 25.03.2024.

**ಪ್ರಸ್ತಾವನೆ:**

1. ಮೇಲೆ ಓದಲಾದ ಕ್ರ.ಸಂ.(1) ರ ಪತ್ರದಲ್ಲಿ ಗ್ರಾಮ ಪಂಚಾಯಿತಿ/ ಗ್ರಾಮೀಣ ಸ್ಥಳೀಯ ಸಂಸ್ಥೆಗಳು ವಿದ್ಯುತ್ ಸರಬರಾಜು ಕಂಪನಿಗಳಿಗೆ ದಿನಾಂಕ: 01.04.2015 ರಿಂದ ದಿನಾಂಕ: 31.03.2023 ರವರೆಗೆ ಪಾವತಿಸಬೇಕಾಗಿರುವ ಕುಡಿಯುವ ನೀರು ಮತ್ತು ಬೀದಿ ದೀಪ ಸ್ಥಾವರಗಳ ವಿದ್ಯುತ್ ಶುಲ್ಕದ ಒಟ್ಟು ಬಾಕಿ ಮೊತ್ತ ರೂ.6,509.83 (ಅಸಲು ರೂ.5257.70 + ಬಡ್ಡಿ ರೂ.1252.20) ಕೋಟಿಗಳಿರುತ್ತದೆ. ಸದರಿ ಬಾಕಿ ಮೊತ್ತಗಳು ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಗಳ ಹಾಗೂ ಸಂಬಂಧಿಸಿದ ಗ್ರಾಮ ಪಂಚಾಯಿತಿಗಳ ನಡುವೆ ಸಮನ್ವಯವಾಗಿರುತ್ತದೆ. ಸದರಿ ಸಂಬಂಧ ಗ್ರಾಮ ಪಂಚಾಯಿತಿ/ ಗ್ರಾಮೀಣ ಸ್ಥಳೀಯ ಸಂಸ್ಥೆಗಳು ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿಸಬೇಕಾಗಿರುವ ಬಾಕಿ ಮೊತ್ತ ರೂ.6,509.83 ಕೋಟಿಗಳನ್ನು ಸರ್ಕಾರದ ವತಿಯಿಂದ ಪಾವತಿಸಲು ಅಥವಾ ಸರ್ಕಾರದ ಖಾತರೀಕರಣ ಒದಗಿಸಲು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಸರ್ಕಾರಕ್ಕೆ ಮಾಹಿತಿ ನೀಡಿರುತ್ತಾರೆ.

2. ಮೇಲೆ ಓದಲಾದ ಕ್ರ.ಸಂ.(2) ರ ಟಿಪ್ಪಣಿಯಲ್ಲಿ ಆಡಳಿತ ಇಲಾಖೆಯು ಈ ಕೆಳಕಂಡಂತೆ ಆರ್ಥಿಕ ಇಲಾಖೆಯು ಪ್ರಸ್ತಾವನೆ ನೀಡಲಾಗಿರುತ್ತದೆ.

ವಿದ್ಯುತ್ ಸರಬರಾಜು ಕಂಪನಿಗಳು ಈಗಾಗಲೇ ತೀವ್ರ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದ್ದು, ವಿದ್ಯುತ್ ಖರೀದಿ ಶುಲ್ಕವನ್ನು ಪಾವತಿಸಲು ಹಾಗೂ ಕಂಪನಿಯ ಇತರೆ ವೆಚ್ಚಗಳನ್ನು ಭರಿಸಲು ಕಷ್ಟಕರವಾಗುತ್ತಿರುವುದಾಗಿ, ವಿದ್ಯುತ್ ಸರಬರಾಜು ಕಂಪನಿಗಳು ವಿದ್ಯುತ್ ಖರೀದಿ / ಪ್ರಸರಣ ವೆಚ್ಚವನ್ನು ತಿರುವಳಿ ಮಾಡಲು, ಸಾಲ ಮರುಪಾವತಿ, ಆಡಳಿತ ವೆಚ್ಚ ಮತ್ತು ಶಾಸನಬದ್ಧ ವೆಚ್ಚಗಳನ್ನು ಪಾವತಿಸುವುದರ ಮೇಲೆ ತೀವ್ರ ವ್ಯತಿರಿಕ್ತ ಪರಿಣಾಮವುಂಟಾಗಿ ಕಂಪನಿಗಳ ಹಣಕಾಸಿನ ಸ್ಥಿತಿಯು ಗಂಭೀರವಾಗಿರುತ್ತದೆ.



Scanned with OKEN Scanner

ವಿದ್ಯುತ್ ಸರಬರಾಜು ಕಂಪನಿಗಳು ವಿವಿಧ ಹಣಕಾಸು ಸಂಸ್ಥೆಗಳು (PFC/REC), ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲ ಪಡೆದು ಕಂಪನಿಯ ದೈನಂದಿನ ವೆಚ್ಚಗಳನ್ನು ಭರಿಸಲಾಗುತ್ತಿದೆ. ವಿದ್ಯುತ್ ಸರಬರಾಜು ಕಂಪನಿಗಳು ವಿವಿಧ ವಿದ್ಯುತ್ ಉತ್ಪಾದಕರುಗಳಿಂದ ಖರೀದಿಸುತ್ತಿರುವ ವಿದ್ಯುತ್‌ಗಾಗಿ ನಿಗಧಿತ ಅವಧಿಯೊಳಗೆ ವಿದ್ಯುತ್ ಖರೀದಿ ಶುಲ್ಕವನ್ನು ಪಾವತಿಸಲು ಸಾಧ್ಯವಾಗದೇ Late Payment Surcharge ನ್ನು ವಿದ್ಯುತ್ ಉತ್ಪಾದಕರುಗಳಿಗೆ ಪಾವತಿಸುತ್ತಿದೆ.

ದಿನಾಂಕ: 01.04.2015 ರಿಂದ ದಿನಾಂಕ: 31.03.2023 ರವರೆಗೆ ವಿದ್ಯುತ್ ಸರಬರಾಜು ಕಂಪನಿಗಳು ಮತ್ತು ಗ್ರಾಮ ಪಂಚಾಯಿತಿಗಳು ಸಮನ್ವಯಗೊಂಡಿರುವ ಕುಡಿಯುವ ನೀರು ಮತ್ತು ಬೀದಿ ದೀಪ ವಿದ್ಯುತ್ ಸ್ಥಾವರಗಳ ಮೊತ್ತ ರೂ.6,509.83 ಕೋಟಿಗಳನ್ನು ಸರ್ಕಾರವು ವಿದ್ಯುತ್ ಸರಬರಾಜು ಕಂಪನಿಗಳಿಗೆ ಅನುದಾನವನ್ನು ಬಿಡುಗಡೆ ಮಾಡುವಂತೆ ಅಥವಾ ಖಾತರೀಕರಣದ (Securitization) ಮೂಲಕ ತೀರುವಳಿ ಮಾಡುವ ವ್ಯವಸ್ಥೆ ಮಾಡುವಂತೆ ಕೋರಿ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ನೀಡಲಾಗಿರುತ್ತದೆ. ವಿದ್ಯುತ್ ಸರಬರಾಜು ಕಂಪನಿವಾರು ಕುಡಿಯುವ ನೀರು ಮತ್ತು ಬೀದಿ ದೀಪ ವಿದ್ಯುತ್ ಸ್ಥಾವರಗಳ ಬಾಕಿ ಮೊತ್ತದ ವಿವರಗಳ ತಃಖ್ತೆ ಈ ಕೆಳಕಂಡಂತಿರುತ್ತದೆ.

**(ರೂ.ಕೋಟಿಗಳಲ್ಲಿ)**

| ಕ್ರ.ಸಂ | ವಿದ್ಯುತ್ ಸರಬರಾಜು ಕಂಪನಿಗಳ ಹೆಸರು | ದಿನಾಂಕ: 31.03.2023 ರ ಅಂತ್ಯಕ್ಕೆ ಇರುವ ಬಾಕಿ ವಿದ್ಯುತ್ ಶುಲ್ಕದ ಮೊತ್ತ (ಸಮನ್ವಯಗೊಳಿಸಿರುವ ಮೊತ್ತ) | | | |
|---|---|---|---|---|---|
| | | ವಿವರ | ಅಸಲು | ಬಡ್ಡಿ | ಒಟ್ಟು |
| 1 | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ | ಕುಡಿಯುವ ನೀರು ಸ್ಥಾವರಗಳು | 2646.95 | 675.42 | 3322.37 |
| | | ಬೀದಿ ದೀಪ ಸ್ಥಾವರಗಳು | 370.50 | 114.61 | 485.11 |
| | | **ಒಟ್ಟು** | **3017.45** | **790.03** | **3807.48** |
| 2 | ಮಂಗಳೂರು ವಿದ್ಯುತ್ ಸರಬರಾಜು ಕಂಪನಿ | ಕುಡಿಯುವ ನೀರು ಸ್ಥಾವರಗಳು | 93.68 | 8.26 | 101.94 |
| | | ಬೀದಿ ದೀಪ ಸ್ಥಾವರಗಳು | 17.38 | 1.84 | 19.22 |
| | | **ಒಟ್ಟು** | **111.06** | **10.10** | **121.16** |
| 3 | ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ | ಕುಡಿಯುವ ನೀರು ಸ್ಥಾವರಗಳು | 395.96 | 60.88 | 456.84 |
| | | ಬೀದಿ ದೀಪ ಸ್ಥಾವರಗಳು | 55.36 | 10.24 | 65.60 |
| | | **ಒಟ್ಟು** | **451.32** | **71.12** | **522.44** |
| 4 | ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ | ಕುಡಿಯುವ ನೀರು ಸ್ಥಾವರಗಳು | 852.05 | 189.77 | 1041.82 |
| | | ಬೀದಿ ದೀಪ ಸ್ಥಾವರಗಳು | 487.31 | 136.86 | 624.17 |
| | | **ಒಟ್ಟು** | **1339.36** | **326.63** | **1665.99** |
| 5 | ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ | ಕುಡಿಯುವ ನೀರು ಸ್ಥಾವರಗಳು | 265.95 | 41.18 | 307.13 |
| | | ಬೀದಿ ದೀಪ ಸ್ಥಾವರಗಳು | 72.56 | 13.14 | 85.70 |
| | | **ಒಟ್ಟು** | **338.51** | **54.32** | **392.83** |
| 6 | ಒಟ್ಟು | **ಕುಡಿಯುವ ನೀರು ಸ್ಥಾವರಗಳು** | **4254.59** | **975.51** | **5230.10** |
| | | **ಬೀದಿ ದೀಪ ಸ್ಥಾವರಗಳು** | **1003.11** | **276.69** | **1279.80** |
| | | **ಒಟ್ಟು** | **5257.70** | **1252.20** | **6509.90** |



Scanned with OKEN Scanner

3. ಮೇಲೆ ಓದಲಾದ ಕ್ರ.ಸಂ. (3) ರ ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಯು ಸದರಿ ಪ್ರಸ್ತಾವನೆಗೆ ಈ ಕೆಳಕಂಡ ಅಭಿಪ್ರಾಯವನ್ನು ನೀಡಿರುತ್ತದೆ.

1. Securitization of Grama Panchayats Dues of Rs.5257.70 Crores (Principal Only). M/s PCKL would be the Nodal Agency.
2. State Govt. Guarantee would be given for raising loan of Rs.5257.70 Crores by M/s PCKL. M/s PCKL to ensure that the loans are raised in open and transparent process to ensure that Terms of the Loans are Highly Competitive.
3. The Loans should be at least 10 Year Tenure with Moratorium of at least 2 Years.
4. The ESCOMS have to Waive the Interest Charged of Rs.1252.20 Crores.
5. The Debt Servicing to be carried out of resources available though own sources or under State Finance Commission grants of Gram Panchayats. If in any FY, Gram Panchayats fails to mobilize necessary funds needed for Debt Servicing, then State Govt. would ensure funds are made available for the same in order to prevent revocation of Govt Guarantee. State Govt. would tap Guarantee Redemption Fund set up for such Exigencies.
6. The Loans Raised by M/s PCKL has to be mandatorily used towards clearing Power Purchase Dues and pre mature retirement of Short Term Loans raised for Power Purchase.
7. Further, the Loans raised by M/s PCKL has to be distributed as below:
   i. KPCL = 50%
   ii. KPTCL = 10%
   iii. ESCOMs = 40%
8. Rest of the procedure regarding accounting mechanism as prescribed in G.O EN 3 PSR 2016/P3, dated: 31.03.2017 to be followed.
9. RDPR to ensure that future demand for electricity charges of Grama Panchayats should invariably paid regularly without allowing accumulation of any arrears subsequent to the cut-off date of 31.03.2023.
10. The Department to take ratification of the Cabinet.

ಸದರಿ ಮೇರೆಗೆ ಈ ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ/61/ಪಿಎಸ್‌ಆರ್/2024**
**ಬೆಂಗಳೂರು, ದಿನಾಂಕ: 30.03.2024**

ಗ್ರಾಮ ಪಂಚಾಯಿತಿ / ಗ್ರಾಮೀಣ ಸ್ಥಳೀಯ ಸಂಸ್ಥೆಗಳು ದಿನಾಂಕ: 01.04.2015 ರಿಂದ ದಿನಾಂಕ: 31.03.2023 ರವರೆಗೆ ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿಸಬೇಕಾಗಿರುವ ಕುಡಿಯುವ ನೀರು



Scanned with OKEN Scanner

ಮತ್ತು ಬೀದಿ ದೀಪ ಸ್ಥಾವರಗಳ ಸಮನ್ವಯಗೊಂಡಿರುವ ಬಾಕಿ ವಿದ್ಯುತ್ ಶುಲ್ಕದ ಅಸಲು ಮೊತ್ತವನ್ನು ಈ ಕೆಳಕಂಡ ಷರತ್ತುಗಳಂತೆ ಸರ್ಕಾರವು ಖಾತರೀರಣಗೊಳಿಸುವ (Government Guarantee) ಮೂಲಕ ತೀರುವಳಿ ಮಾಡಲು ಆದೇಶಿಸಿದೆ.

1. ಗ್ರಾಮ ಪಂಚಾಯಿತಿ / ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಕುಡಿಯುವ ನೀರು ಮತ್ತು ಬೀದಿ ದೀಪಗಳ ವಿದ್ಯುತ್ ಶುಲ್ಕದ ಅಸಲು ಬಾಕಿ ಮೊತ್ತ ರೂ.5257.70 ಕೋಟಿಗಳನ್ನು ಸರ್ಕಾರದ ಖಾತರೀಕರಣದ ಮೂಲಕ ಸಾಲ ಪಡೆದು ತೀರುವಳಿಗೊಳಿಸುವುದು. ಸದರಿ ಸಂಬಂಧ ಮೆ॥ ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ಸಂಸ್ಥೆಯನ್ನು ನೋಡಲ್ ಏಜೆನ್ಸಿಯಾಗಿ ಗುರುತಿಸಲಾಗಿದೆ / ನೇಮಿಸಲಾಗಿದೆ.
2. ಮೆ॥ ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ಸಂಸ್ಥೆಯು ಬ್ಯಾಂಕ್ ಅಥವಾ ಇತರೆ ಹಣಕಾಸು ಸಂಸ್ಥೆಗಳಿಂದ ಪಡೆಯುವ ಸಾಲ ರೂ.5257.70 ಕೋಟಿಗಳಿಗೆ ಸರ್ಕಾರದ ಖಾತರಿಯನ್ನು ಒದಗಿಸಲಾಗವುದು. ಮೆ॥ ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ಸಂಸ್ಥೆಯವರು ಪಡೆಯಲಿರುವ ಸಾಲವು ಪಾರದರ್ಶಕತೆ ಹಾಗೂ ನಿಯಮಾವಳಿಗಳು ಹೆಚ್ಚು ಸ್ಪರ್ಧಾತ್ಮಕವಾಗಿ ಕೂಡಿರುವುದು.
3. ಮೆ॥ ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ಸಂಸ್ಥೆಯವರು ಪಡೆಯಲಿರುವ ಸಾಲವು ಕನಿಷ್ಠ 10 ವರ್ಷಗಳ ಅವಧಿಯಾಗಿ, ಕನಿಷ್ಟ 2 ವರ್ಷ ಮೊರಟೋರಿಯಂ ಅವಧಿಯನ್ನು ಒಳಗೊಂಡಿರುವುದು.
4. ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳು ದಿನಾಂಕ: 01.04.2015 ರಿಂದ 31.03.2023 ರವರೆಗಿನ ಬಡ್ಡಿ ರೂ.1252.20 ಕೋಟಿಗಳ ಮೊತ್ತವನ್ನು ಈ ಕೆಳಕಂಡಂತೆ ಮನ್ನಾ ಮಾಡುವುದು.

(ರೂ.ಕೋಟಿಗಳಲ್ಲಿ)

| ಕ್ರಸಂ | ವಿದ್ಯುತ್ ಸರಬರಾಜು ಕಂಪನಿಗಳ ಹೆಸರು | ದಿನಾಂಕ: 31.03.2023 ರ ಅಂತ್ಯಕ್ಕೆ ಇರುವ ಬಾಕಿ ವಿದ್ಯುತ್ ಶುಲ್ಕದ ಮನ್ನಾ ಮಾಡುವ ಬಡ್ಡಿ ಮೊತ್ತ | |
|---|---|---|---|
| | | ವಿವರ | ಬಡ್ಡಿ |
| 1 | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ | ಕುಡಿಯುವ ನೀರು ಸ್ಥಾವರಗಳು | 675.42 |
| | | ಬೀದಿ ದೀಪ ಸ್ಥಾವರಗಳು | 114.61 |
| | | **ಒಟ್ಟು** | **790.03** |
| 2 | ಮಂಗಳೂರು ವಿದ್ಯುತ್ ಸರಬರಾಜು ಕಂಪನಿ | ಕುಡಿಯುವ ನೀರು ಸ್ಥಾವರಗಳು | 8.26 |
| | | ಬೀದಿ ದೀಪ ಸ್ಥಾವರಗಳು | 1.84 |
| | | **ಒಟ್ಟು** | **10.10** |
| 3 | ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ | ಕುಡಿಯುವ ನೀರು ಸ್ಥಾವರಗಳು | 60.88 |
| | | ಬೀದಿ ದೀಪ ಸ್ಥಾವರಗಳು | 10.24 |
| | | **ಒಟ್ಟು** | **71.12** |
| 4 | ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ | ಕುಡಿಯುವ ನೀರು ಸ್ಥಾವರಗಳು | 189.77 |
| | | ಬೀದಿ ದೀಪ ಸ್ಥಾವರಗಳು | 136.86 |
| | | **ಒಟ್ಟು** | **326.63** |



Scanned with OKEN Scanner

| | | | |
|---|---|---|---|
| 5 | ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ | ಕುಡಿಯುವ ನೀರು ಸ್ಥಾವರಗಳು | 41.18 |
| | | ಬೀದಿ ದೀಪ ಸ್ಥಾವರಗಳು | 13.14 |
| | | ಒಟ್ಟು | 54.32 |
| 6 | ಒಟ್ಟು | ಕುಡಿಯುವ ನೀರು ಸ್ಥಾವರಗಳು | 975.51 |
| | | ಬೀದಿ ದೀಪ ಸ್ಥಾವರಗಳು | 276.69 |
| | | ಒಟ್ಟು | 1252.20 |

5. ಮೆ॥ ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ಸಂಸ್ಥೆಯವರು ಪಡೆಯಲಿರುವ ಸಾಲವನ್ನು ಆಂತರಿಕ ಸಂಪನ್ಮೂಲದ ಮೂಲಕ ತಿರುವಳಿ ಮಾಡುವುದು ಅಥವಾ ಗ್ರಾಮ ಪಂಚಾಯಿತಿ / ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಸರ್ಕಾರದ ವತಿಯಿಂದ ಆರ್ಥಿಕ ಹಣಕಾಸು ಆಯೋಗದಡಿಯಲ್ಲಿ ನೀಡಲಿರುವ ಅನುದಾನದಲ್ಲಿ ತಿರುವಳಿಗೊಳಿಸುವುದು. ಯಾವುದೇ ಆರ್ಥಿಕ ವರ್ಷದಲ್ಲಿ ಗ್ರಾಮ ಪಂಚಾಯಿತಿ / ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಸಾಲದ ತೀರುವಳಿಗೆ ಹಣ / ನಿಧಿಯನ್ನು ಸಂಗ್ರಹಿಸಲು ವಿಫಲವಾದರೆ ಸರ್ಕಾರದ ಗ್ಯಾರಂಟಿ ಹಿಂತೆಗೆದುಕೊಳ್ಳುವ ಪ್ರಕ್ರಿಯೆಯನ್ನು ತಡೆಯಲು ಸರ್ಕಾರವು ಸದರಿ ತಿರುವಳಿಗಾಗಿ ಅಗತ್ಯವಿರುವ ಹಣವನ್ನು ಒದಗಿಸುವುದು. ರಾಜ್ಯ ಸರ್ಕಾರವು ಸದರಿ ನಿಟ್ಟಿನಲ್ಲಿ ಸ್ಥಾಪಿಸಲಾಗಿರುವ ಗ್ಯಾರಂಟಿ ರಿಡಂಪ್ಷನ್ ಫಂಡ್ (Redemption Fund) ಮೂಲಕ ಹಣವನ್ನು ಒದಗಿಸುವುದು.

6. ಮೆ॥ ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ಸಂಸ್ಥೆಯವರು ಪಡೆಯಲಿರುವ ಸಾಲವನ್ನು ವಿದ್ಯುತ್ ಖರೀದಿಯ ಬಾಕಿಗಳಿಗೆ ಹಾಗೂ ಅಲ್ಪಾವಧಿ ಸಾಲಗಳನ್ನು ತಿರುವಳಿಗೋಸ್ಕರ ಮಾತ್ರ ವಿನಿಯೋಜಿಸುವುದು.

7. ಮೇಲೆ ಓದಲಾದ ಕ್ರಮ ಸಂಖ್ಯೆ 3 ರ ಲ್ಲಿನ ಆರ್ಥಿಕ ಇಲಾಖೆಯ ಟಿಪ್ಪಣಿಯಲ್ಲಿ ನೀಡಿರುವ ಸಾಲದ ಶೇಕಡವಾರು ಹಂಚಿಕೆಯನ್ನು ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಇವರಿಗೆ ವಿದ್ಯುತ್ ಸರಬರಾಜು ಕಂಪನಿಗಳಿಗೆ ದಿನಾಂಕ 31.03.2020ರ ಅಂತ್ಯಕ್ಕೆ ಬಾಕಿಯಿರುವ ವಿದ್ಯುತ್ ಖರೀದಿ ಶುಲ್ಕವನ್ನು ಮೆ. ರಾಮರಾಜ್ ಮತ್ತು ಕೋ. ಬೆಂಗಳೂರು ಇವರಿಂದ ಸಮನ್ವಯಗೊಳಿಸಿ ರೂ.17016.54 ಕೋಟಿಗಳನ್ನು ಪಾವತಿಸಲು ವಿದ್ಯುತ್ ಸರಬರಾಜು ಕಂಪನಿಗಳಿಗೆ ಸರ್ಕಾರಿ ಆದೇಶ ಸಂಖ್ಯೆ Energy/468/PSR/2023 ದಿನಾಂಕ: 30.03.2024 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಹಿನ್ನಲೆಯಲ್ಲಿ ಆರ್ಥಿಕ ಇಲಾಖೆಯೊಂದಿಗೆ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಇವರ ದಿನಾಂಕ 31.03.2020 ರ ಬಾಕಿಯನ್ನು ಸಮನ್ವಯಗೋಳಿಸಿರುವುದರಿಂದ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಇವರ ವಿದ್ಯುತ್ ಬಾಕಿಯು ಹೆಚ್ಚಾಗಿರುವ ವಿಷಯವನ್ನು ಚರ್ಚಿಸಿ, ದಿನಾಂಕ 25.03.2024ರ ಟಿಪ್ಪಣಿಯಲ್ಲಿ ನೀಡಿರುವ ಶೇಕಡವಾರು ಹಂಚಿಕೆಯನ್ನು ಈ ಕೆಳಕಂಡಂತೆ ಮಾರ್ಪಡಿಸಲಾಗಿದೆ. ಆದ್ದರಿಂದ, ಮೆ॥ ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ಸಂಸ್ಥೆಯವರು ಪಡೆಯಲಿರುವ ಸಾಲವನ್ನು ಈ ಕೆಳಕಂಡಂತೆ ಹಂಚಿಕೆ ಮಾಡುವುದು.



Scanned with OKEN Scanner

(ರೂ.ಕೋಟಿಗಳಲ್ಲಿ)

| ಕ್ರ.ಸಂ | ವಿದ್ಯುತ್ ಉತ್ಪಾದನೆ / ಪ್ರಸರಣ / ಸರಬರಾಜು ಕಂಪನಿಯ ಹೆಸರು | ಶೇಕಡವಾರು ಹಂಚಿಕೆ | ಶೇಕಡವಾರು ಹಂಚಿಕೆ ಮೊತ್ತ |
|---|---|---|---|
| 1 | ಕರ್ನಾಟಕ ವಿದ್ಯುತ್ ನಿಗಮ ನಿಯಮಿತ | 70% | 3680.40 |
| 2 | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ | 10% | 525.77 |
| 3 | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ | 20% | 603.49 |
| 4 | ಮಂಗಳೂರು ವಿದ್ಯುತ್ ಸರಬರಾಜು ಕಂಪನಿ | | 22.22 |
| 5 | ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ | | 90.26 |
| 6 | ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ | | 267.86 |
| 7 | ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ | | 67.70 |
| 8 | ಒಟ್ಟು ಮೊತ್ತ | | **5257.70** |

8. ವಿದ್ಯುತ್ ಸರಬರಾಜು ಕಂಪನಿಗಳು ಗ್ರಾಮ ಪಂಚಾಯಿತಿ / ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ವಿದ್ಯುತ್ ಮಾರಾಟದಿಂದಾಗಿ ಸದರಿ ಸಂಸ್ಥೆಗಳು ಪಾವತಿಸುವ ವಿದ್ಯುತ್ ಶುಲ್ಕ ಮತ್ತು ಬಾಕಿ ಶುಲ್ಕದ ಮೊತ್ತವನ್ನು ಮೆ॥ ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ಸಂಸ್ಥೆಯವರಿಗೆ ನಿಯತಕಾಲಿಕವಾಗಿ ಸದರಿ ಸಾಲದ ತಿರುವಳಿಗೊಸ್ಕರ ಸಾಲವು ಪೂರ್ಣವಾಗಿ ತಿರುವಳಿಯಾಗುವವರೆಗೆ ಪಾವತಿಸುವುದು.
9. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ (ಆರ್.ಡಿ.ಪಿ.ಆರ್) ಇಲಾಖೆಯು ವಾರ್ಷಿಕವಾಗಿ ಸದರಿ ಸಾಲದ ತಿರುವಳಿಗೊಸ್ಕರ ಅಗತ್ಯವಿರುವ ಮೊತ್ತವನ್ನು ವಾರ್ಷಿಕ ಆಯವ್ಯಯದಲ್ಲಿ ಬಡ್ಡಿ ಮೊತ್ತವನ್ನು ಸೇರಿಸಿ, ಹಂಚಿಕೆಗೊಳಿಸಲು ಕ್ರಮಕೈಗೊಳ್ಳುವುದು. ಸದರಿ ಸಾಲದ ವಂತಿಗೆ (ಅಸಲು ಮತ್ತು ಬಡ್ಡಿ) ಮೊತ್ತವನ್ನು ಮೆ॥ ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ಸಂಸ್ಥೆಯವರಿಗೆ ಮರು ಪಾವತಿಸುವ ನಿಟ್ಟಿನಲ್ಲಿ ನೀಡಿ ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಗಳ ಮೊತ್ತಕ್ಕೆ ಲೆಕ್ಕೀಕರಿಸುವುದು.
10. ಸಂಬಂಧಿಸಿದ ಗ್ರಾಮ ಪಂಚಾಯಿತಿ / ಗ್ರಾಮೀಣ ಸ್ಥಳೀಯ ಸಂಸ್ಥೆಗಳು ವಿದ್ಯುತ್ ಸರಬರಾಜು ಕಂಪನಿಗೆ ಪಾವತಿಸಬೇಕಾಗಿರುವ ವಿದ್ಯುತ್ ಶುಲ್ಕದ ಮೊತ್ತವನ್ನು ಮೆ॥ ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ಸಂಸ್ಥೆಯವರಿಗೆ ವರ್ಗಾಯಿಸುವುದು. ಮೆ॥ ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ಸಂಸ್ಥೆಯವರು ವರ್ಗಾಯಿಸಲಾದ ವಿದ್ಯುತ್ ಶುಲ್ಕದ ಮೊತ್ತವನ್ನು ಸಾಲದ ಮೊತ್ತಕ್ಕೆ ಹೈಪಾತಿಕೇಟ್ (Hypothecate) ಮಾಡುವುದು.
11. ಮೆ॥ ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ಸಂಸ್ಥೆಯವರು ಸರ್ಕಾರಿ ಖಾತರೀಕರಣದಡಿಯಲ್ಲಿ ಸಾಲವನ್ನು ಪಡೆದು ಮೆ॥ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಇವರಿಗೆ ವರ್ಗಾಯಿಸಲ್ಪಡುವ ಮೊತ್ತವನ್ನು ವಿದ್ಯುತ್ ಸರಬರಾಜು ಕಂಪನಿಗಳು ಬಾಕಿ ಇರುವ ಅಸಲಿನ ಮೊತ್ತಕ್ಕೆ ಮಾತ್ರ ಲೆಕ್ಕೀಕರಿಸುವುದು.



Scanned with OKEN Scanner

12. ಮೆ॥ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳು ಸರ್ಕಾರದ ಖಾತರೀಕರಣವನ್ನು ತಮ್ಮ ಲೆಕ್ಕ ಪತ್ರಗಳಲ್ಲಿ ಸೂಕ್ತವಾಗಿ ವಿದ್ಯುತ್ ಖರೀದಿ ಮೊತ್ತವು ಕಡಿಮೆಯಾಗುವ ನಿಟ್ಟಿನಲ್ಲಿ ಲೆಕ್ಕೀಕರಿಸುವುದು ಹಾಗೂ ವಿದ್ಯುತ್ ಸರಬರಾಜು ಕಂಪನಿಗಳು RDPR ಇಲಾಖೆ ಹಾಗೂ ಗ್ರಾಮ ಪಂಚಾಯಿತಿ / ಗ್ರಾಮೀಣ ಸ್ಥಳೀಯ ಸಂಸ್ಥೆಗಳ ವಿದ್ಯುತ್ ಬಾಕಿ ಮೊತ್ತಕ್ಕೆ ಲೆಕ್ಕೀಕರಿಸುವುದು.
13. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ (ಆರ್.ಡಿ.ಪಿ.ಆರ್) ಇಲಾಖೆಯ ಗ್ರಾಮ ಪಂಚಾಯಿತಿ / ಗ್ರಾಮೀಣ ಸ್ಥಳೀಯ ಸಂಸ್ಥೆಗಳು ದಿನಾಂಕ: 01.04.2015 ರಿಂದ 31.03.2023 ರವರೆಗಿನ ಅಸಲು ವಿದ್ಯುತ್ ಬಾಕಿ ಮೊತ್ತ ರೂ.5257.70 ಕೋಟಿಗಳನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿ ಮಾಡುವ ಮೊತ್ತಗಳಿಗೆ ಲೆಕ್ಕೀಕರಿಸುವುದು.
14. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ (ಆರ್.ಡಿ.ಪಿ.ಆರ್) ಇಲಾಖೆಯು ದಿನಾಂಕ: 01.04.2023 ರಿಂದ ಬಾಕಿ ಇರುವ ಹಾಗೂ ಬೇಡಿಕೆಯಾಗುವ ವಿದ್ಯುತ್ ಶುಲ್ಕಗಳನ್ನು (ಅಸಲು ಮತ್ತು ಬಡ್ಡಿ) ನಿಯತಕಾಲಿಕವಾಗಿ ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿ ಮಾಡುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳುವುದು ಹಾಗೂ ದಿನಾಂಕ: 01.04.2023 ರಿಂದ ಯಾವುದೇ ಬಾಕಿಯು ಉಲ್ಬಣವಾಗದಂತೆ / ಹೆಚ್ಚಾಗದಂತೆ ನಿಯತಕಾಲಿಕವಾಗಿ ಪಾವತಿಸುವುದು.
15. ಮೆ॥ ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ಸಂಸ್ಥೆಯವರು ಪಡೆಯಲಿರುವ ರೂ.5257.70 ಕೋಟಿಗಳ ಸಾಲದ ಮೊತ್ತಕ್ಕೆ ತಗಲುವ ಸಂಭವನೀಯ (Incidental Expenses) ವೆಚ್ಚಗಳನ್ನು ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು ಬಾಕಿ ಮೊತ್ತದ ಅನುಪಾತವಾರು ಭರಿಸುವುದು.

ಈ ಆದೇಶವನ್ನು ಕಡತ ಸಂಖ್ಯೆ: ಎನರ್ಜಿ/61/ಪಿಎಸ್‌ಆರ್/2024 ರಲ್ಲಿ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD/359/EXP 1/2023 ದಿನಾಂಕ: 25.03.2024 ರಲ್ಲಿ ಆರ್ಥಿಕ ಇಲಾಖೆಯು ನೀಡಿರುವ ಸಹಮತಿಯನ್ವಯ ಹೊರಡಿಸಿದೆ ಹಾಗೂ ಸಚಿವ ಸಂಪುಟದ ಘಟನೋತ್ತರ ಅನುಮೋದನೆಗೆ ಒಳಪಟ್ಟಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

30/3/24

(ಅಪರ್ಣಾ ಪಾವಟೆ)
ಸರ್ಕಾರದ ಅಪರ ಕಾರ್ಯದರ್ಶಿ
ಇಂಧನ ಇಲಾಖೆ.

**ಇವರಿಗೆ:**

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಇವರಿಗೆ ಪ್ರಕಟಣೆಗಾಗಿ.



Scanned with OKEN Scanner

ಪ್ರತಿಗಳು:

1. ಮಹಾಲೇಖಪಾಲರು(ಎ&ಇ)/ (ಲೆಕ್ಕಪರಿಶೋಧನೆ-1 & ಲೆಕ್ಕಪರಿಶೋಧನೆ-2) ಕರ್ನಾಟಕ, ಬೆಂಗಳೂರು-1.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ (ಪಂಚಾಯತ್ ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು
5. ವ್ಯವಸ್ಥಾಪಕ ನಿರ್ದೇಶಕರು, ಕ.ವಿ.ಪ್ರ.ನಿ.ನಿ / ಕ.ವಿ.ನಿ.ನಿ / ಬೆ.ವಿ.ಕಂ / ಮ.ವಿ.ಕಂ / ಹು.ವಿ.ಕಂ / ಗು.ವಿ.ಕಂ / ಚಾ.ವಿ.ಸ.ನಿ.ನಿ.
6. ವ್ಯವಸ್ಥಾಪಕ ನಿರ್ದೇಶಕರು, ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್, ಕಾವೇರಿ ಭವನ, ಬೆಂಗಳೂರು.
7. ಸರ್ಕಾರದ ಕಾರ್ಯದರ್ಶಿ, (ಆಯವ್ಯಯ ಮತ್ತು ಸಂಪನ್ಮೂಲ), ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
8. ಕಾರ್ಯದರ್ಶಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, #16, ಸಿ-1, ಮಿಲ್ಲರ್ಸ್ ಬಿಡ್ ಏರಿಯಾ, ವಸಂತನಗರ, ಬೆಂಗಳೂರು-52.
9. ನಿರ್ದೇಶಕರು, ಟ್ರೆಶರಿ ನೆಟ್ ವರ್ಕ್, ಮೇನೇಜ್ ಮೆಂಟ್ ಸೆಂಟರ್, ಖನಿಜ ಭವನ, ಬೆಂಗಳೂರು.
10. ಜಂಟಿ ನಿರ್ದೇಶಕರು, ಸ್ಟೇಟ್ ಹುಜೂರ್ ಟ್ರೆಶರಿ, ನೃಪತುಂಗ ರಸ್ತೆ, ಬೆಂಗಳೂರು.
11. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಹಿರಿಯ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ.
12. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
13. ಸರ್ಕಾರದ ಅಧೀನ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
14. ಶಾಖೆಯ ರಕ್ಷಾ ಕಡತ / ಕಚೇರಿ ಪ್ರತಿ / ಹೆಚ್ಚುವರಿ ಪ್ರತಿಗಳು.



Scanned with OKEN Scanner